ಚರ್ಚೆಯಾಗಬೇಕು. ಇಂದೇ ನಿಯಮ 60ರಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

5. (ಅ) ಸಭಾಧ್ಯಕ್ಷರ ತೀರ್ಪು:

ವಿಷಯ: ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ನಿಯಮ 60 ರ ಬದಲು ನಿಯಮ 69 ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು.

ಅಧ್ಯಕ್ಷರು:– ನಿಯಮ 69 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ (ಸಿರಾ):– ಇಂದೇ ಚರ್ಚೆ ಮಾಡಿದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಧ್ಯಾಹ್ನದ ಮೇಲೆ ಚರ್ಚೆ ಮಾಡೋಣ.

ಅಧ್ಯಕ್ಷರು:– ಈಗ ವಂದನಾ ನಿರ್ಣಯ move ಮಾಡಲಿ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ):– ಬರಗಾಲದ ಬಗ್ಗೆ ಪ್ರಾರಂಭ ಮಾಡೋಣ. ಬೇರೆ important ವಿಷಯ ಇದ್ದರೆ ಮಾಡಿ. ಇಲ್ಲದಿದ್ದರೆ ಬರಗಾಲದ ಬಗ್ಗೆ ಚರ್ಚೆಸೋಣ.

ಶ್ರೀ ಸುರೇಶ್ ಕುಮಾರ್ (ಕಾನೂನು ಹಾಗೂ ನಗರಾಭಿವೃದ್ಧಿ ಸಚಿವರು):– ಮಧ್ಯಾಹ್ನ ಚರ್ಚೆ ಮಾಡೋಣ.

ಅಧ್ಯಕ್ಷರು:– ಇದನ್ನು ನಿಯಮ 69 ರಡಿಯಲ್ಲಿ ಮಧ್ಯಾಹ್ನ ನಂತರ ಶ್ರೀ ಹೆಚ್.ಡಿ. ರೇವಣ್ಣ ಮತ್ತು ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಲಿ. ಈಗ ವೀರಣ್ಣ ಚರಂತಿಮಠ ಅವರು ಮಾತನಾಡಿ.